ಹೆಸರಿಟ್ಟು ನಮ್ಮ ಮಹಿಳಾಮಣಿಗಳ ಮೇಲೆ ಆರೋಪ ಹೊರಿಸಲಾಯಿತು. ಸ್ತ್ರೀವಾದಿ ಮಹಿಳೆಯರಿಗಾದರೂ ನಮ್ಮ ಮೇಲೆ ಸ್ವಲ್ಪ ಅನುಕಂಪ ಇರಬೇಕಿತ್ತು. ಮನೆಮನೆಗಳಲ್ಲಿ ಮಹಿಳೆಯರಿಗೇ ನಮ್ಮ ಬಗ್ಗೆ ಸಹಾನುಭೂತಿ ಇಲ್ಲ. ಹೆಣ್ಣಿನ ಕೆಲಸ ಹೆರುವುದು, ಸಂತಾನೋತ್ಪತ್ತಿ ಮಾಡುವುದು ಅಲ್ಲವೇ? ಹಾಗೆ ಮಾಡಲು ಅದಕ್ಕೊಂದಿಷ್ಟು ಮನುಷ್ಯರ ರಕ್ತ ಬೇಕು. ಅದಕ್ಕೆ ತಕ್ಕ ಅಂಗರಚನೆಯನ್ನು ದೇವರು ನಮಗೆ ದಯ ಪಾಲಿಸಿದ್ದಾನೆ. ಭೂಮಿಯ ಮೇಲಿನ ಮನುಷ್ಯನ ಜನಸಂಖ್ಯೆಯನ್ನು ಸ್ವಲ್ಪ ನಿಯಂತ್ರಣದಲ್ಲಿ ಇಡಿ ಎಂದು ದೇವರು ನಮಗೆ ಜವಾಬ್ದಾರಿಯನ್ನು ಹೊರಿಸಿ ಕಳಿಸಿದ್ದಾನೆ. ಹೀಗಾಗಿ ರಕ್ತ ಹೀರುವಾಗ ಮನುಷ್ಯನ ದೇಹದಲ್ಲಿ ಏನಾದರೂ ನಮ್ಮ ಮೂಲಕ ಸೇರಿದರೆ ಅದಕ್ಕೆ ನಾವು ಜವಾಬ್ದಾರರಲ್ಲ. ಅದು ದೇವರ ಆಟ. ದೇವರು ವಹಿಸಿದ ಕೆಲಸವನ್ನು ನಾವು ನಮ್ಮ ಶಕ್ತ್ಯಾನುಸಾರ ಮಾಡುತ್ತಿದ್ದೇವೆ. ನಮ್ಮನ್ನು ಸಂಹರಿಸುವುದೆಂದರೆ ದೇವರ ಕಾರ್ಯದಲ್ಲಿ ಅಡತಡೆ ಒಡ್ಡಿದಂತೆಯೇ ಅಲ್ಲವೇ?

ಕಳೆದ ನೂರಾರು ವರ್ಷಗಳಿಂದ ನಮ್ಮನ್ನು ಸಂಹರಿಸಲು ಮನುಷ್ಯ ಅನೇಕ ಕುಟಿಲೋಪಾಯಗಳನ್ನು ಮಾಡುತ್ತಿದ್ದಾನೆ. ಅವನಿಗೆ ಅದರಲ್ಲಿ ಯಶ ಸಿಕ್ಕಿಲ್ಲ. ಯಾಕೆಂದರೆ ನಮಗೆ ದೇವರ ಅಭಯ ಇದೆ. ದೇವರು ಇನ್ನೂ ಹೆಚ್ಚೆಚ್ಚು ಜವಾಬ್ದಾರಿಯನ್ನ ನಮಗೆ ವಹಿಸುತ್ತಿದ್ದಾನೆ. ಅದರ ಫಲವೇ ಡೆಂಗಿ. ನಮಗೆ ವಹಿಸಿದ ಜವಾಬ್ದಾರಿಯನ್ನು ನಾವು ಸಮರ್ಪಕವಾಗಿ ನಿರ್ವಹಿಸಬಲ್ಲೆವೆಂಬ ಭರವಸೆ ನಮಗಿದೆ.

ಇಷ್ಟಾಗಿಯೂ ಮನುಷ್ಯರಿಗೆ ರೋಗ ಬರಲೆಂದು ನಾವು ಕಚ್ಚುವುದಿಲ್ಲ. ನಮ್ಮ ಉದ್ದೇಶ ನಮ್ಮ ಅತ್ಯಲ್ಪ ಆಹಾರವಷ್ಟೇ. ಅಬ್ಬಬ್ಬಾ ಅಂದರೂ ನಾವು ಹೀರುವ ರಕ್ತ ಎಷ್ಟು? ಮನೆಯಲ್ಲಿರುವ ನಮ್ಮ ಸಂತತಿ ಎಲ್ಲ ಸೇರಿ ದಿನಕ್ಕೆ ಒಂದೆರಡು ಹನಿ ರಕ್ತ. ಅಷ್ಟಕ್ಕೆ ಎಷ್ಟೊಂದು ರಂಪಾಟ. ಏನೂ ಇಲ್ಲದೆ ನಾವು ಎಷ್ಟೋ ದಿನ ಉಪವಾಸ ಇರುತ್ತೇವೆ. ಆದರೂ ಬದುಕುತ್ತೇವೆ. ಮಲೆತು ನಿಂತ ನೀರಲ್ಲಿ ನಮ್ಮ ಬದುಕು ಕಟ್ಟಿಕೊಳ್ಳುತೇವೆ.

ನಮ್ಮ ಕುರಿತು ಇಷ್ಟೆಲ್ಲ ರಂಪಾಟ ಮಾಡುವ ಮಾನವ ತಾನು ಸಂಹರಿಸಿ ಭಕ್ಷಿಸುವ ಜೀವಿಗಳ ಬಗ್ಗೆ ಎಂದಾದರೂ ಯೋಚಿಸಿದ್ದಾನೆಯೆ? ಕುರಿ-ಕೋಳಿ, ಮೀನು-ಮೊಟ್ಟೆ ಎಂದು ಅವನು ತಿನ್ನಲಾರದ ಜೀವಿಗಳೇ ಇಲ್ಲ. ತನ್ನದು ಮಾತ್ರ ಜೀವ. ಉಳಿದ ಜೀವಗಳಿಗೆ ಬೆಲೆಯೇ ಇಲ್ಲ. ಅವುಗಳನ್ನು ಕೊಂದು ತಿಂದು ಬಾಯಿ ಚಪ್ಪರಿಸುವ ಮನುಷ್ಯ ನಾವೊಂದಿಷ್ಟು ರಕ್ತ ಹೀರಿದರೆ ಎಷ್ಟೊಂದು ರಂಪಾಟ ಮಾಡುತ್ತಾನೆ! ನಾವು ರಕ್ತ ಹೀರಿದ ಮೇಲೆ ಅವನಿಗೆ ಒಂದಿಷ್ಟು ತುರಿಕೆ ಆಗಬಹುದು. ಅಷ್ಟಕ್ಕೆ ನಮ್ಮನ್ನು ಕೊಂದೇ ಹಾಕುವುದೇ? ನಾವು ಕಚ್ಚುವುದು ರಕ್ತ ಹೀರಲಿಕ್ಕೆ. ಆ ಮೂಲಕ ರೋಗ ಕೊಡಲಿಕ್ಕೆ ಅಲ್ಲ. ನಮ್ಮಂಥ ನಿಕೃಷ್ಟ ಜೀವಿಯ ಕಡಿತದಿಂದ ಮನುಷ್ಯನಿಗೆ ಅದೆಂತು ರೋಗ ಬರುತ್ತದೆಯೋ ಏನೋ, ಅದು ಆ ದೇವರಿಗೆ ಗೊತ್ತು. ಈ ಬಗ್ಗೆ ಮಾನವ, ಆ ದೇವರನ್ನು ಪ್ರಶ್ನಿಸಬೇಕು. ಅದನ್ನು ಬಿಟ್ಟು ನಮ್ಮನ್ನು ಕೊಲ್ಲಲು ಮುಂದಾಗುವುದಲ್ಲ.

ಮೊನ್ನೆ ಎಲ್ಲ ಟೀವಿ ಚಾನೆಲ್‌ಗಳು ದಿನವೆಲ್ಲ ಊಳಿಡುತ್ತಿದ್ದವು. ಯಾವನೋ ಒಬ್ಬ ನಟನಂತೆ. ಏನೋ ದುಷ್ಕೃತ್ಯ ಮಾಡಿದ ಆರೋಪದಲ್ಲಿ ಜೈಲು ಪಾಲಾಗಿದ್ದಾನೆ. ಅಲ್ಲಿ ಅವನ ತೂಕ ಕಡಿಮೆ ಆಗಿದೆಯಂತೆ. ಅವನಿಗೆ ಮನೆ ಊಟ ಬೇಕಂತೆ. ಅದಕ್ಕೆ ಕೋರ್ಟು, ಕಚೇರಿ ಎಂದು ನೂರೆಂಟು ತರದ ಚರ್ಚೆ ಮಾಡುತ್ತಿದ್ದರು. ಎಲಾ ಮನುಷ್ಯನೇ, ಹೀಗೆ ಎಲ್ಲ ಜೀವಿಗಳ ಬಗ್ಗೆ ಎಂದಾದರೂ ಚಿಂತಿಸಿರುವೆಯಾ? ನಿಮ್ಮಲ್ಲೇ ಎಷ್ಟು ಜನ ಉಪವಾಸ ಸಾಯುವುದಿಲ್ಲ. ಅಂಥವರ ಬಗ್ಗೆ ಎಂದಾದರೂ ಚಿಂತೆ ಮಾಡಿರುವೆಯಾ? ಇಲ್ಲ. ಆಹಾರ ಭದ್ರತೆ ಅನ್ನುವುದು ಮನುಷ್ಯನಿಗೆ ಮಾತ್ರವೇ? ನಮ್ಮಂಥ ಜೀವಿಗಳಿಗಿಲ್ಲವೆ? ಹೊಟ್ಟೆ ಹೊರೆಯುವುದು ನಮಗೆ ದೈನಂದಿನ ಚಿಂತೆಯೇ. ಮನುಷ್ಯ ಮನುಷ್ಯನ ರಕ್ತ ಹೀರುವ ಬಗ್ಗೆ, ಇತರ ಮನುಷ್ಯರನ್ನು ಯುದ್ಧದ ಹೆಸರಿನಲ್ಲಿ ಕೊಲ್ಲುವ ಬಗ್ಗೆ ನಾವು ಕೇಳಿದ್ದೇವೆ.

ಮೊನ್ನೆ ಟೀವಿಯಲ್ಲಿ ಗಮನಿಸಿದೆ. ಅದೆಲ್ಲೋ ಈಗ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಹದಿನೈದು ಸಾವಿರ ಮಕ್ಕಳು ಸಹಿತ ನಲವತ್ತು ಸಾವಿರ ಜನ ಸತ್ತಿದ್ದಾರಂತೆ. ಎರಡು ದೇಶಗಳೇ ಹಾಳಾಗಿವೆಯಂತೆ. ಹೆಂಗಸರು, ಮಕ್ಕಳು ಅನ್ನದೇ ಒಬ್ಬರನ್ನೊಬ್ಬರು ಕೊಂದುಕೊಳ್ಳುತ್ತಿದ್ದಾರೆ. ಆ ಬಗ್ಗೆ ಮನುಷ್ಯನಿಗೆ ಏನೂ ಅನ್ನಿಸುವುದೇ ಇಲ್ಲ. ಇವರು ಎಂಥಾ ಮನುಷ್ಯರಪ್ಪಾ ಎಂದು ನಮಗೇ ಖೇದವೆನಿಸುತ್ತದೆ.